# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು  ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನ ದಿನಾಂಕ: 06-01-2021 ರಂದು ನಡೆದ  ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21 / 21-09-2020 ರ ಆದೇಶದಂತೆ ದಿನಾಂಕ: 06-01-2021 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಮೂದಾಯ ಭವನ, ಗೌತಮ್ ಪುರ, ಬೆಂಗಳೂರು. ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಸಭೆಗೆ ಹಾಜರಿದ್ದವರ ವಿವರಗಳು**

1) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ,ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
2) ಶ್ರೀ. ಮೂರ್ತಿ, ವಾರ್ಡ್ ಸಮಿತಿಯ ಕಾರ್ಯದರ್ಶೀ ,ಸಹಾಯಕ ಕಂದಾಯ ಅಧಿಕಾರಿ (ದೊಮ್ಮಲೂರು),  ಸಹಾಯಕ ಅಭಿಯಂತರರು  ಹಾಗೂ ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು, ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
3) ವಾರ್ಡ್ ಸಮಿತಿ ಸದಸ್ಯರು,
    1) ಶ್ರೀಮತಿ. ಆಶಾ ಆಲ್ವಿನ್
    2) ಶ್ರೀಮತಿ. ಗಾಯತ್ರಿ,
    3) ಶ್ರೀ, ರಮೇಶ್ ರೆಡ್ಡಿ,
    4) ಶ್ರೀ.ಹೇಮಂತ್ ನಾಗಾ
    5) ಶ್ರೀ. ನಂದಿಶ್ ಗೌಡ,
    6) ಶ್ರೀನಿವಾಸ್ ನಾಯ್ಡು,
    7) ಶ್ರೀ. ಗಜರಾಜ
    8) ಶ್ರೀ. ಉಮೇಶ್ ರವರು  ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಹಾಜರಿದ್ದ ಅಧಿಕಾರಿಗಳನ್ನು ಮತ್ತು  ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ ದಿನಾಂಕ: 19-12-2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಯನ್ನು ನೋಡೆಲ್ ಅಧಿಕಾರಿಯವರು  ಸಂಕ್ಷಿಪ್ತವಾಗಿ ಓದುತ್ತಾ .ಒಂದೊಂದು ವಿಷಯವನ್ನು ಹಾಗೂ ಅದರ ಕ್ರಮ ತೆಗೆದುಕೊಂಡಿರುವ ಬಗ್ಗೆ ಚರ್ಚಿಸಲಾಯಿತು.

**ವಾರ್ಡ್ 89– ಜೋಗುಪಾಳ್ಯ ದಿನಾಂಕ: 19-12-2020 ರಂದು ವಾರ್ಡ್ ಸದಸ್ಯರ ಸಭೆಯಲ್ಲಿ ಚರ್ಚಿಸಿದಂತಹ ಪ್ರಮುಖ ವಿಷಯಗಳಿಗೆ ದಿನಾಂಕ: 06-01-2021 ರ ಸಭೆಯಲ್ಲಿ ಕ್ರಮ ಕೈಗೊಂಡಿರುವ ಬಗ್ಗೆ ವಿವರಗಳು**

1) ಹಣ್ಣು ತರಕಾರಿ ವ್ಯಾಪಾರಸ್ಥರು SOUND SYSTEM ಬಳಸುತ್ತಿರುವುದರಿಂದ ಸ್ಥಳೀಯ ನಾಗರೀಕ ತೊಂದರೆಯಾಗುತ್ತಿದೆ. ಆಗಾಗಿ SOUND SYSTEM ಬಳಸುವುದನ್ನು ಇದ್ದನ್ನು ತಡೆಗಟ್ಟಲು ಶ್ರೀನಿವಾಸ ನಾಯ್ಡು ರವರು ಮಾನ್ಯ ಶಾಸಕರಲ್ಲಿ ಕೋರಿದರು– ಅರಕ್ಷಕ ಸಿಬ್ಬಂದಿರವರು ಕ್ರಮವಹಿಸುವುದು.

**ಉತ್ತರ:– ಸದರಿ ವಿಷಯದ ಬಗ್ಗೆ, ಸಭೆಯಲ್ಲಿ ಸದಸ್ಯರು ಶೇಕಡ 60% ರಷ್ಟು, ಹಣ್ಣು ತರಕಾರಿ ವ್ಯಾಪಾರಸ್ಥರು SOUND SYSTEM ಬಳಸುತ್ತಿರುವುದು ಕಡಿಮೆಯಾಗಿದೆ ಎಂದು ತಿಳಿಸಿದರು.**

2) 10ನೇ ಬೀದಿಯಲ್ಲಿ (PATH HOLES) ರಸ್ತೆ ಗುಂಡಿಗಳನ್ನು ಮುಚ್ಚಲು ರಮೇಶ್‌ರೆಡ್ಡಿ ರವರು ಕೋರಿದರು. –ಶ್ರೀ. ಮೂರ್ತಿ, AE, ಬಿಬಿಎಂಪಿ ರವರು ಕ್ರಮವಹಿಸುವುದು.

**ಉತ್ತರ:– ಸದರಿ ವಿಷಯದ ಬಗ್ಗೆ, ಸಭೆಯಲ್ಲಿ ಕಾಮಗಾರಿ ಇನ್ನೂ ಪೂರ್ಣಗೊಂಡಿರುವುದಿಲ್ಲ ಸಹಾಯಕ ಅಭಿಯಂತರರು ಮುಂದಿನ ಸಭೆಯ ಒಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದೆಂದು ತಿಳಿಸಲಾಯಿತು.**

3) ಡಾ// ರಾಜ್ ಕುಮಾರ್ ಪುಥ್ಥಲಿ ಹತ್ತಿರ ನೀರು ಚಿಮ್ಮುತ್ತಿದ್ದು, ನೀರು ಚಿಮ್ಮುವುದನ್ನು ತಡೆಯಲು ಕೋರಲಾಯಿತು. –**BWSSB, AEE** ರವರು ಕ್ರಮವಹಿಸುವುದು.

**ಉತ್ತರ:–ಸದರಿ ವಿಷಯದ ಬಗ್ಗೆ, BWSSB, AEE** ರವರು ಕೆಲಸವನ್ನು ಪೂರ್ಣಗೊಳಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

4) ಬಿಬಿಎಂಪಿ ಸ್ಕೂಲ್ ನಲ್ಲಿ ಯೋಗ ಕೇಂದ್ರ ನಡೆಸಲು ಮತ್ತು ಪೂಜೆ ಮಾಡಲು ಟೀಚರ್ ರಾಜೇಶ್ವರಿ ರವರು ಮುಂದಾಗಿದ್ದು, ಇವರು ಯೋಗ ಕೇಂದ್ರ ನಡೆಸಲು ಯಾರು ಅನುಮತಿ ನೀಡಿರುವುದಿಲ್ಲ, – **EE (ಶಾಂತಿನಗರ) ಬಿಬಿಎಂಪಿ ರವರು ಕ್ರಮವಹಿಸುವುದು.**

5) 3ನೇ ಮತ್ತು 4ನೇ ಕ್ರಾಸ್, ಚೆಂಬರ್ ಲೈನ್ ಇನ್ನೂ ಸರಿಯಾಗಿ ಸರಿಪಡಿಸಿಲ್ಲ ಪೂರ್ತಿಯಾಗಿ ಸರಿಪಡಿಸಲು ವಾರ್ಡ್ ಸಮಿತಿ ಸದಸ್ಯರಾದ (ಉಮೇಶ್) ಕೋರಿದರು ***BWSSB, AEE*** *ರವರು* ಕ್ರಮವಹಿಸುವುದು.

**ಉತ್ತರ:– ಸದರಿ ವಿಷಯದ ಬಗ್ಗೆ, BWSSB, AEE** ರವರು 3ನೇ ಕ್ರಾಸ್‌ನಲ್ಲಿ ಕಾಮಗಾರಿ ಪೂರ್ಣಗೊಂಡಿದ್ದು, ಮತ್ತು 4ನೇ ಕ್ರಾಸ್ ನಲ್ಲಿ ಮುಂದಿನ ಸಭೆಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದೆಂದು ತಿಳಿಸಲಾಯಿತು.

6) ನ್ಯಾಯ ಬೆಲೆ ಅಂಗಡಿಯಲ್ಲಿ ಸರಿಯಾಗಿ ದವಸ ಧಾನ್ಯಗಳನ್ನು ಹಂಚುತ್ತಿಲ್ಲ ಸದರಿ ಅಂಗಡಿರವರನ್ನು ವಿಚಾರಿಸಲು ವಾರ್ಡ್ ಸಮಿತಿ ಸಭೆ ಸದಸ್ಯರಾದ ಶ್ರೀಮತಿ. ಗಾಯತ್ರಿ ರವರು ಕೋರಿದರು- **ನೋಡೆಲ್ ಅಧಿಕಾರಿ ರವರು ಕ್ರಮವಹಿಸುವುದು.**

**ಉತ್ತರ:- ಸದರಿ ವಿಷಯದ ಬಗ್ಗೆ, ನೋಡೆಲ್ ಅಧಿಕಾರಿ ರವರು ನ್ಯಾಯಾ ಬೆಲೆ ಅಂಗಡಿಗೆ ಖುದ್ದು ಹಾಜರಾಗಿ ವಿತರಿಕರ ಜೋತೆಗೆ ಚರ್ಚಿಸಿ ಮುಂದಿನ ದಿನಗಳಲ್ಲಿ ಯಾವುದೇ ರೀತಿಯ ದೂರು ಬಾರದಂತೆ ನೋಡಿಕೊಳ್ಳಲು ಹಾಗೂ ಸರಿಯಾಗಿ ಸಾರ್ವಜನಕರಿಗೆ ದವಸ ದ್ಯಾನಗಳನ್ನು ಹಂಚಲು ಸೂಚಿಸಲಾಯಿತು ಎಂದು ಸಭೆಯಲ್ಲಿ ತಿಳಸಲಾಯಿತು.**

7) ಮೋಟಪ್ಪನಪಾಳ್ಯದಲ್ಲಿ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸರಿಯಾಗಿ ಸಿಂಪಡಣೆ ಯಾಗುತ್ತಿಲ್ಲ, ಔಷಧಿ ಸಿಂಪಡಿಸಲು ಆಶಾ ಅಲ್ವಿನ್ ರವರು ಕೋರಿದರು.-**ಹಿರಿಯ ಆರೋಗ್ಯ ಅಧಿಕಾರಿ ರವರು ಕ್ರಮ ವಹಿಸುವುದು .**

**ಉತ್ತರ:- ಸದರಿ ವಿಷಯದ ಬಗ್ಗೆ, ಹಿರಿಯ ಆರೋಗ್ಯ ಅಧಿಕಾರಿ ರವರು ಕ್ರಮವಹಿಸಿರುತ್ತಾರೆ ಎಂದು ಸಭೆಯಲ್ಲಿ ತಿಳಸಲಾಯಿತು,**

8) ಸಿಸಿ ಟಿವಿ ಕ್ಯಾಮರಾ ಗಳನ್ನು ವಾರ್ಡ್‌ನಲ್ಲಿ ಇನ್ನೂ ಅಳವಡಿಸಿಲ್ಲವೆಂದು ಸಭೆಯಲ್ಲಿ ಹೇಳಾಯಿತ್ತು. - **AE ವಿದ್ಯುತ್ (ಪೂರ್ವ) ಮಂಜಪ್ಪ (ಶಾಂತಿನಗರ) ಬಿಬಿಎಂಪಿ ರವರು ಕ್ರಮವಹಿಸುವುದು.**

**ಉತ್ತರ:- ಸದರಿ ವಿಷಯದ ಬಗ್ಗೆ, ಶ್ರೀ. ಮೂರ್ತಿ, AE, ಬಿಬಿಎಂಪಿ ರವರು AE ವಿದ್ಯುತ್ (ಪೂರ್ವ) ಮಂಜಪ್ಪ (ಶಾಂತಿನಗರ) ಬಿಬಿಎಂಪಿ ರವರಿಗೆ ಕಾಮಗಾರಿಯ ಬಗ್ಗೆ ಗುತ್ತಿಗೆದಾರರಾದ ಜಗದೀಶ್ ರವರಿಗೆ ಸಂಪರ್ಕಿಸಲು ಹಾಗೂ ಮುಂದಿನ ಕ್ರಮವಹಿಸಲು ತಿಳಸಲಾಯಿತು.**

9) ಸಾಯಿ ಬಾಬಾ ದೇವಸ್ಥಾನ, ಕೇಂಬ್ರಿಡ್ಜ್ ರಸ್ತೆ ಹತ್ತಿರ ಬಿಬಿಎಂಪಿ ಸ್ಥಳವನ್ನು, ಬಿಡಿಎ ರವರು ಆಕ್ರಮಿಸಿರುವುದನ್ನು ತೆರೆವುಗೊಳಿಸಿ ಪಾಲಿಕೆ ವಶಕ್ಕೆ ಪಡೆದು, ಪಾಲಿಕೆಯ ಸ್ವತ್ತೆಂದು ನಾಮಫಲಕ ಹಾಕಲು ಕೋರಲಾಯಿತು. **-ಶ್ರೀ. ಮೂರ್ತಿ, AE, ಬಿಬಿಎಂಪಿ ರವರು ಕ್ರಮವಹಿಸುವು.**

**ಉತ್ತರ:- ಸದರಿ ವಿಷಯದ ಬಗ್ಗೆ, ಸಭೆಯಲ್ಲಿ ನೋಡೆಲ್ ಅಧಿಕಾರಿ ರವರು** ಸಾಯಿ ಬಾಬಾ ದೇವಸ್ಥಾನ, ಕೇಂಬ್ರಿಡ್ಜ್ ರಸ್ತೆ ಹತ್ತಿರ ಬಿಬಿಎಂಪಿ ಸ್ಥಳವನ್ನು, ಆಕ್ರಮಿಸಿರುವುದನ್ನು ತೆರೆವುಗೊಳಿಸಿ ಪಾಲಿಕೆ ವಶಕ್ಕೆ ಪಡೆಯಲಾಗಿದ್ದು, ಪಾಲಿಕೆಯ ಸ್ವತ್ತೆಂದು ನಾಮಫಲಕ ಹಾಕಲಾಗಿದೆ ಎಂದು ಸಭೆಯಲ್ಲಿ ತಿಳಸಲಾಯಿತು.

10) ಜೋಗುಪಾಳ್ಯ ವಾರ್ಡ್‌ನಲ್ಲಿ ಕಳ್ಳಕಕರ ಹವಾಳಿ ಮತ್ತು ಪುಂಡ ಪೋಕರಿಗಳ ಹವಾಳಿಯನ್ನು ತಡೆಗಟ್ಟಲು ಆರಕ್ಷಕ ಸಿಬ್ಬಂದಿ ರವರಿಗೆ ಗಸ್ತು ಹೆಚ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಶಾಸಕರು ಸೂಚಿಸಿದರು,- **ಅರಕ್ಷಕ ಸಿಬ್ಬಂದಿರವರು ಕ್ರಮವಹಿಸುವುದು.**

**ಉತ್ತರ:- ಸದರಿ ವಿಷಯದ ಬಗ್ಗೆ, ನೋಡೆಲ್ ಅಧಿಕಾರಿ ರವರು 2ನೇ ಮತ್ತು 3ನೇ ಅಡ್ಡರಸ್ತೆಗಳನ್ನು ಹೊರೆತು ಪಡಿಸಿ ಆಕ್ಷಕರ ಸಿಬ್ಬಂದಿರವರು ಕ್ರಮವಹಿಸಿರುತ್ತಾರೆಂದು ತಿಳಸಲಾಯಿತು.**

## ವಾರ್ಡ್ 89- ಜೋಗುಪಾಳ್ಯ ದಿನಾಂಕ: 06-01-2021 ರಂದು ವಾರ್ಡ್ ಸದಸ್ಯರ ಸಭೆಯಲ್ಲಿ ಚರ್ಚಿಸಿದಂತಹ ಪ್ರಮುಖ ವಿಷಯಗಳು

**ಕಾಮಗಾರಿ ಸಮಸ್ಯೆ:-**

10ನೇ ಮುಖ್ಯ ಬೀದಿಯಲ್ಲಿ ಜಲ್ಲಿ ಕಲ್ಲು ಮಣ್ಣು ಹಾಕಿ ಹಾಗೆ ಬಿಟ್ಟಿರುತ್ತಿರಿ, ಒಂದು ತಿಂಗಳನಿಂದ ಯಾವುದೇ ಕ್ರಮ ವಹಿಸಿರುವುದಿಲ್ಲ ಇದರಿಂದ ಸಾರ್ವಜನಿಕರಿಗೆ ಓಡಾಡಲು ಹಾಗೂ ವಾಹನ ಸಂಚಾರ ಮಾಡಲು ಕಷ್ಟವಾಗಿದೆ, ಎಂದು ವಾರ್ಡ್ ಸದಸ್ಯರೊಬ್ಬರು ನೋಡೆಲ್ ಅಧಿಕಾರಿರವರಲ್ಲಿ ತಿಳಿಸಲಾಯಿತು.-(**BWSSB, AEE ರವರು ಮತ್ತು AEE ರವರು ಮತ್ತು ಕಾಮಗಾರಿ ವಿಭಾಗದವರು ಕ್ರಮ ವಹಿಸುವುದು** )

**BESCOM , ಸಮಸ್ಯೆ:-**

**ಶ್ರೀ.ಮುನಿರಾಜು ರವರು BESCOM** ,ಗೆ ಸಂಬಂದಿಸಿದಂತೆ, 4ನೇ ಮುಖ್ಯರಸ್ತೆಯಲ್ಲಿ ವಿದ್ಯುತ್ ಕಂಬಗಳು ರಸ್ತೆ ಮಧ್ಯದಲ್ಲಿ ಹಾಕಿರುವುದನ್ನು ತೆರವುಗೊಳಸಲು ಹಲವಾರು ಭಾರಿ ವಾರ್ಡ್ ಕಮಿಟಿ ಸಭೆಯಲ್ಲಿ ತಿಳಿಸಿದ್ದರೂ ಸಹ ಇದುವರೆವಿಗೂ ಸದರಿ ಕಂಬಗಳನ್ನು ತೆರವುಗೊಳಸದೇ ಹಾಗೇ ಬಿಟ್ಟಿದ್ದು, ಇದರಿಂದ ವಾಹನ ಸಂಚಾರಿಗಳಿಗೆ ತೊಂದರೆಯಾಗುತ್ತಿದ್ದು, ಅದ್ದರಿಂದ ಕಂಬಗಳನ್ನು ತುರ್ತಾಗಿ ತೆರೆವಿಗೊಳಿಸಲು ಕೋರಿದರು, (**BESCOM AEE ರವರು ಕ್ರಮ ವಹಿಸುವುದು** )

**ಸಾರ್ವಜನಿಕರ ಶೌಚಾಲಯದ ಬಗ್ಗೆ,**

ಶ್ರೀ. ಮುನಿರಾಜ್ ರವರು ಸಾರ್ವಜನಿಕರ ಶೌಚಾಲಯ ನಿರ್ಮಾಣ ಮಾಡುವ ಸಲುವಾಗಿ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದಂತೆ, ಸಾರ್ವಜನಿಕ ಶೌಚಾಲಯಕ್ಕಾಗಿ ಈಗಾಗಲೇ ಸ್ಥಳ ಗುರುತಿಸಲಾಗಿದೆ. ಶ್ರೀಘ್ರವಾಗಿ, ಕಾಮಗಾರಿ ಶುರು ಮಾಡಬೇಕಾಗಿ, ಕೋರಲಾಯಿತು.

( **ಕಾಮಗಾರಿ AEE & AE ವಿಭಾಗದವರು ಕ್ರಮ ವಹಿಸುವುದು** )

**ರಸ್ತೆಗೆ ಟಾರ್ ಹಾಕುವ ಬಗ್ಗೆ ,**

ಸಭೆಯಲ್ಲಿ ಸದಸ್ಯರೊಬ್ಬರು, ಜೋಗುಪಾಳ್ಯದ ಈಶ್ವರ ಲೇಔಟ್, & 15 ಕ್ರಾಸ್ ರಸ್ತೆಯಲ್ಲಿ ಟಾರ್ ಹಾಕದೇ ಹಾಗೇ ಬಿಟ್ಟಿರುತ್ತಿರಿ, ಸದರಿ ರಸ್ತೆಗಳಿಗೆ ಟಾರ್ ಹಾಕಿಸಿ ಕೊಡಲು ಕೋರಲಾಯಿತು. ( **ಕಾಮಗಾರಿ AEE & AE ವಿಭಾಗದವರು ಕ್ರಮ ವಹಿಸುವುದು** )

**ಮರ ಕಟ್ಟಾವು ಮಾಡಿರುವ ಬಗ್ಗೆ,**

ಶ್ರೀ, ಹೇಮಂತ್ ನಾಗಾ ರವರು ಪಾಲಿಕೆ ಅರಣ್ಯ ವಿಭಾಗದವರು, ಜಿ ಸ್ಟ್ರೀಟ್‌ನಲ್ಲಿ ಮರ ಕಟ್ಟಾವು ಮಾಡಲಾಗಿರುತ್ತದೆ. ಸದರಿ ಕಟ್ಟಾವು ಮಾಡಿದ ಮರಗಳಿಂದ ರಸ್ತೆಯಲ್ಲಿ ಕಸ ಕಡ್ಡಿ ತೆರೆವುಗೊಳಸದೇ ಹಾಗೇಯೇ ಬಿಟ್ಟಿರುವುದರಿಂದ, ಓಡಾಡಲು ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಆದುದರಿಂದ ಮರಗಿಡ್ಡಿಗಳನ್ನು ಕಟ್ಟಾವು ಮಾಡಿದ ತಕ್ಷಣ ವೇ ಅರಣ್ಯ ಸಿಬ್ಬಂದಿಗಳು ತೆರೆವುಗೊಳಸಲು ಕೋರಿದರು. ( **ಅರಣ್ಯ ಸಿಬ್ಬಂದಿಗಳು ಕ್ರಮ ವಹಿಸುವುದು** )

**ತಳ್ಳುವ ಗಾಡಿ ಮತ್ತು ಬೀದಿ ಬದಿ ವ್ಯಾಪಾರಸ್ಥರಿಂದ ಹಾಗೂವ ಸಮಸ್ಯೆ:-**

ಶ್ರೀ. ಹೇಮಂತ್ ನಾಗಾ ಮತ್ತು ಚಂದ್ರ ರವರು. ಜಿ ಸ್ಟ್ರೀಟ್‌ನಲ್ಲಿ ಸುಮಾರು ಜನ ಬೀದಿ ಬದಿಯಲ್ಲಿ ಮತ್ತು ತಳ್ಳೊವ ಗಾಡಿಯಲ್ಲಿ ವ್ಯಾಪಾರ ಮಾಡುತ್ತಿದ್ದು. ಇವರಿಗೆ ಯಾವುದೇ ರೀತಿಯ ಟ್ರೇಡ್ ಲೇಸ್ಸನ್ ಇರುವುದಿಲ್ಲ ಮತ್ತು ಕೆಲವೊಂದು ಮಳಿಗೆಗಳು ಟ್ರೇಡ್ ಲೇಸ್ಸನ್ ಇಲ್ಲದೇ ವ್ಯಾಪಾರವನ್ನು ಮಾಡುತ್ತಿರುತ್ತಾರೆ. ಇದರಿಂದ. ಪಾಲಿಕೆಗೆ ಆದಾಯ ನಷ್ಟವಾಗುತ್ತಿದೆ. ಮತ್ತು ಓಡಾಡುವ ಸಾರ್ವಜನಿಕರಿಗೆ ಪುಟ್‌ಪಾತ್. ಇಲ್ಲದೇ ತೊಂದರೆಯಾಗುತ್ತಿದ್ದು. ಹಾಗೂ ತಳ್ಳುವ ಗಾಡಿ ವ್ಯಾಪಾರಸ್ಥರಿಂದ ವಾಹನ ಸಂಚಾರರಿಗೆ ದಕ್ಕೆ ಉಂಟಾಗುತ್ತಿರುವುದರಿಂದ. ತಳ್ಳುವ ಗಾಡಿ ಮತ್ತು ಬೀದಿ ಬದಿ ವ್ಯಾಪಾರಸ್ಥರನ್ನು ತೆರವುಗೊಳಿಸುವ ಕಾರ್ಯಚರಣೆಯನ್ನು ಮಾಡಲು ಕೋರಿದರು. ( **ಕಾಮಗಾರಿ AEE & AE ಆರೋಗ್ಯ ವಿಭಾಗದವರು ಕ್ರಮ ವಹಿಸುವುದು** )

**ಸಿಸಿಟಿವಿ, ಕ್ಯಾಮರದ ಬಗ್ಗೆ,**

ಶ್ರೀ. ಶ್ರೀನಿವಾಸ್ ನಾಯ್ಡು ರವರು ಜೋಗುಪಾಳ್ಯ ವಾರ್ಡ್‌ನಲ್ಲಿ ಕಳ್ಳಕಕರ ಹವಾಳ ಮತ್ತು ಪುಂಡ ಪೋಕರಿಗಳ ಹವಾಳಿಯನ್ನು ಹೆಚ್ಚಾಗಿರುವುದರಿಂದ ಸಿಸಿಟಿವಿ ಕ್ಯಾಮಾರಗಳನ್ನು ಎಲ್ಲಾ ಸ್ಟ್ರೀಟ್ ಗಳಲ್ಲಿ ಅಳವಡಿಸಲು ಕೋರಲಾಯಿತು. ( **ಕಾಮಗಾರಿ AEE & AE ವಿಭಾಗದವರು ಕ್ರಮ ವಹಿಸುವುದು** )

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ. ಸಭೆಯನ್ನು ಮುಕ್ತಾಯಗೊಳಿಸಿದರು.

**ನೋಡೆಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ-89- ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ**
**ಸಹಾಯಕ ಅಭಿಯಂತರರು**
ವಾರ್ಡ್ ಸಂಖ್ಯೆ-89- ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು,**

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ